ಅ) ರಿಟ್ ಪೆಟೆಷನ್ ನಂ. 13524/99ರಲ್ಲಿ ದಿನಾಂಕ: 25.2.2003ರಂದು ಘನ ರಾಜ್ಯ ಉಚ್ಚ ನ್ಯಾಯಾಲಯ ಕೊಟ್ಟಿರುವ ತೀರ್ಪನ್ನು ಜಾರಿಗೊಳಿಸುವಂತೆ ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ ದೊಡ್ಡಬಾತಿ. ಇದಕ್ಕೆ ನಿರ್ದೇಶನ ಕೊಟ್ಟಿರುವುದು ನಿಜವೇ: (ಪ್ರತಿ ಒದಗಿಸುವುದು)

ಆ) ಸದರಿ ನಿರ್ದೇಶನವನ್ನು ಕಾರ್ಖಾನೆಯವರು ಜಾರಿಗೊಳಿಸಿರುತ್ತಾರೆಯೇ;

ಇ) ಇಲ್ಲವಾದಲ್ಲಿ, ಕಾರಣಗಳೇನು ಇವುಗಳು ಸಕಾರಣಗಳಾಗಿರದೇ ಇದ್ದಲ್ಲಿ ಸರ್ಕಾರ ತೆಗೆದುಕೊಂಡಿರುವ ಮತ್ತು ತೆಗೆದುಕೊಳ್ಳುವ ಕ್ರಮಗಳೇನು?

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು)

ಅ) ಗೌರವಾನ್ವಿತ ಉಚ್ಚ ನ್ಯಾಯಾಲಯವು ದಿನಾಂಕ 25.2.2003ರಂದು ನೀಡಿರುವ ತೀರ್ಪನ್ನು ಅನುಷ್ಠಾನಗೊಳಿಸುವಲ್ಲಿ ಕೈಗೊಂಡ ಕ್ರಮದ ಬಗ್ಗೆ ವರದಿ ನೀಡಲು ಸಕ್ಕರೆ ನಿರ್ದೇಶಕರು ದಿನಾಂಕ: 25.4.2003ರ ಪತ್ರದಲ್ಲಿ ಕಾರ್ಖಾನೆಯ ವ್ಯವಸ್ಥಾಪಕರ ನಿರ್ದೇಶಕರಿಗೆ ಸೂಚಿಸಿರುತ್ತಾರೆ.

ಆ) ಉದ್ಭವಿಸುವುದಿಲ್ಲ.

ಇ) ಮಾರುಕಟ್ಟೆಯಲ್ಲಿ ಸಕ್ಕರೆ ಧಾರಣೆ ತೀವ್ರವಾಗಿ ಕುಸಿದಿರುವುದಾಗಿ ಕಾರ್ಖಾನೆಯು ತೀವ್ರ ಆರ್ಥಿಕ ಸಂಕಷ್ಟದಲ್ಲಿರುವುದಾಗಿ ಕಾರ್ಖಾನೆಯು ರೈತರಿಗೆ ರೂ. 9.00 ಕೋಟಿಗಳಷ್ಟು ಬಾಕಿ ಪಾವತಿಸಲು ಇರುವುದಾಗಿ ಹಾಗೂ ಇಂತಹ ಸಂದರ್ಭದಲ್ಲಿ ಗೌರವ ಉಚ್ಚ ನ್ಯಾಯಾಲಯವು ದಿನಾಂಕ: 25.2.2003ರ ಆದೇಶದನಸಾರ 50 ಜನ ಕಾರ್ಮಿಕರಿಗೆ ಶೇ 40ರಷ್ಟು ಹಿಂಬಾಕಿ ವೇತನ ಒಂದೇ ಸಲ ಪಾವತಿಸುವುದು ಕಷ್ಟಕರ ವಿಷಯವಾಗಿರುವುದಾಗಿ ಪರಿಗಣಿಸಿ ಕಾರ್ಖಾನೆಯು ಗೌರವ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಕ್ರಮಸಂಖ್ಯೆ. ಎಸ್ಎಲ್ಪಿಡಿ/ಸಂ/9428/2003ರಲ್ಲಿ ಸಲ್ಲಿಸಿರುತ್ತದೆಂದು ತಿಳಿಸಿರುತ್ತಾರೆ.

ಮೈಸೂರು ನಗರದಲ್ಲಿ ಬಡತನ ರೇಖೆಗಿಂತ ಕಡಿಮೆ ಇರುವವರಿಗೆ ಸೌಲಭ್ಯ

2379 (2721) : ಶ್ರೀ ಶಂಕರ ರೆಡ್ಡಿ ಎಂ. (ಸಿರಗುಪ್ಪ) ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮೈಸೂರು ನಗರದಲ್ಲಿ ಬಡತನರೇಖೆಗಿಂತ ಕಡಿಮೆ ಇರುವವರ ಸಂಖ್ಯೆ ಎಷ್ಟು;

ಆ) ಇವರುಗಳಿಗೆ ಯಾವ ಆಹಾರಪದಾರ್ಥಗಳನ್ನು ಎಷ್ಟೆಷ್ಟು ಪ್ರಮಾಣದಲ್ಲಿ ಹಾಗೂ ಯಾವ ದರದಲ್ಲಿ ನೀಡಲಾಗುತ್ತಿದೆ;

ಇ) ಅನೇಕ ಮಂದಿ ಬಡತನ ರೇಖೆಗಿಂತ ಕಡಿಮೆ ಇರುವವರನ್ನು ಗುರುತಿಸದೇ ಅವರಿಗೆ ಸರ್ಕಾರದ ಸವಲತ್ತು ತಪ್ಪಿಹೋಗುತ್ತಿದೆ ಎಂಬ ದೂರಿನ ಬಗ್ಗೆ ಸರ್ಕಾರ ಯಾವ ಯಾವ ಕ್ರಮ ಕೈಗೊಂಡಿದೆ ತಿಳಿಸುವುದು?

ಶ್ರೀ ರಾಮಲಿಂಗಾರೆಡ್ಡಿ (ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು)

ಅ) ಪ್ರಸ್ತುತ 6,257 ಕುಟುಂಬಗಳನ್ನು ಬಿಪಿಎಲ್ ಕುಟುಂಬಗಳಾಗಿ ಗುರುತಿಸಲಾಗಿದ್ದು ಆ ಎಲ್ಲರಿಗೂ ಪಡಿತರ ಚೀಟಿಗಳನ್ನು ವಿತರಿಸಲಾಗಿರುತ್ತದೆ.

ಹಳದಿ ಪಡಿತರ ಚೀಟಿ	–	4860
ಅಂತ್ಯೋದಯ ಅನ್ನ ಪಡಿತರ ಚೀಟಿ	–	1397
	ಒಟ್ಟು:	**6257**

ಆ)

ಕ್ರ. ಸಂ.	ಪಡಿತರ ಚೀಟಿಯ ವಿಧ	ಪದಾರ್ಥ	ಪ್ರಮಾಣ ಪ್ರತಿ ಪಡಿತರ ಕೆಜಿಗೆ ಚೀಟಿಗೆ ಮಾಹೆಯಾನ	ದರ ಪ್ರತಿ (ರೂ.ಗಳಲ್ಲಿ)
1.	ಅಂ.ಆ.ಯೋ.	ಅಕ್ಕಿ	28 ಕೆಜಿ	3.00
		ಗೋಧಿ	07 ಕೆಜಿ	2.00
2.	ಹಳದಿ	ಅಕ್ಕಿ	08 ಕೆಜಿ	3.50
		ಗೋಧಿ	02 ಕೆಜಿ	2.75
		ಅಕ್ಕಿ	20 ಕೆಜಿ	6.15
		ಗೋಧಿ	05 ಕೆಜಿ	4.65

ಇ) ಘೋಷಿತ ಮತ್ತು ಅಘೋಷಿತ ಕೊಳಚೆ ಪ್ರದೇಶಗಳಲ್ಲಿ ವಾಸಿಸುತ್ತಿರುವ ಬಿ.ಪಿ.ಎಲ್. ಕುಟುಂಬಗಳನ್ನು ಗುರುತಿಸಲು ಮನೆ ಮನೆ ಸಮೀಕ್ಷೆಯನ್ನು ಕೈಗೊಳ್ಳಲಾಗಿರುತ್ತದೆ. ಮೈಸೂರು ನಗರದ ಕೊಳಚೆ ಪ್ರದೇಶಗಳಲ್ಲಿನ 10,953 ಕುಟುಂಬಗಳನ್ನು ಮನೆ ಮನೆ ಸಮೀಕ್ಷೆಯ ವೇಳೆ ಬಿ.ಪಿ.ಎಲ್. ಕುಟುಂಬಗಳಾಗಿ ಗುರುತಿಸಲಾಗಿರುತ್ತದೆ. ಕೊಳಚೆ ಪ್ರದೇಶದಲ್ಲಿ ವಾಸಿಸುತ್ತಿರುವ 30,161 ಬಿ.ಪಿ.ಎಲ್. ಪಡಿತರ ಚೀಟಿ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಕೊಳಚೆ ಪ್ರದೇಶಗಳಿಂದ (ಘೋಷಿತ/ ಅಘೋಷಿತ) ಹೊರಗೆ ವಾಸಿಸುತ್ತಿರುವ ಬಿ.ಪಿ.ಎಲ್. ಕುಟುಂಬಗಳಿಗೂ ಅರ್ಜಿಯನ್ನು ಸಲ್ಲಿಸಲು ಸರ್ಕಾರವು ಅವಕಾಶ ಮಾಡಿಕೊಟ್ಟಿದ್ದು 36,000 ಅರ್ಜಿಗಳನ್ನು ಸ್ವೀಕರಿಸಲಾಗಿರುತ್ತದೆ. ಈ ಬಗ್ಗೆ ಪರಿಶೀಲನೆಯನ್ನು ಕೈಗೊಂಡು ನೈಜ ಬಿ.ಪಿ.ಎಲ್. ಕುಟುಂಬಗಳಿಗೆ ಹಳದಿ ಪಡಿತರ ಚೀಟಿಯನ್ನು ವಿತರಿಸಲಾಗುವುದು.

ಮೈಸೂರು ನಗರದ ಗ್ರಾಹಕರ ಹಿತರಕ್ಷಣೆಗೆ ಸಂಬಂಧಪಟ್ಟಂತೆ ಬಂದ ದೂರುಗಳು

2382 (2718) : ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮೈಸೂರು ನಗರದಲ್ಲಿ ಕಳೆದ ನಾಲ್ಕು ವರ್ಷಗಳಿಂದ ಗ್ರಾಹಕ ಹಿತರಕ್ಷಣೆ ವಿಚಾರವಾಗಿ ಇಲಾಖೆಗೆ ಬಂದ ದೂರುಗಳ ವಿವರ, ದೂರು ನೀಡಿದವರ ವಿಳಾಸ, ದಿನಾಂಕ ಇತ್ಯಾದಿಗಳ ವಿವರ ಒದಗಿಸುವುದು;

ಆ) ಈ ದೂರುಗಳ ಬಗ್ಗೆ ಇಲಾಖೆ ಯಾವ ಯಾವ ಹಂತದಲ್ಲಿ ಯಾವ ಯಾವ ಕ್ರಮ ತೆಗೆದುಕೊಂಡಿದೆ;

ಇ) ಗ್ರಾಹಕರ ಹಿತರಕ್ಷಣೆಗೆ ಸರ್ಕಾರ ಯಾವ ಯಾವ ಕ್ರಮಗಳನ್ನು ಕೈಗೊಳ್ಳುವುದು?

ಶ್ರೀ ರಾಮಲಿಂಗಾರೆಡ್ಡಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ) ದೂರುಗಳ ವಿವರ, ಮೈಸೂರು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆಯಲ್ಲಿ ನೋಂದಣಿ ಆದದ್ದು, 1999ರಿಂದ 2002ರವರೆಗೆ ಈ ಕೆಳಕಂಡಂತಿದೆ: